ಶ್ರೀ ಎಸ್.ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಗಳನ್ನು ನೋಡಿಕೊಳ್ಳುವುದು ಇವರ ಜವಾಬ್ದಾರಿ. ಆದರೆ, Pollution Control Boardನವರು ಎಲ್ಲಾ ಕಡೆ ಹೋಗಿ ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ, ಪರಿಸರ ಇಲಾಖೆಯಿಂದ ಸದರಿ ಪ್ರಶ್ನೆಗೆ ಉತ್ತರ ಕೊಡಿಸುತ್ತೇವೆ.

ಅಧ್ಯಕ್ಷರು:– ಆಯಿತು.

ಶ್ರೀ ಎನ್.ಎ.ಹ್ಯಾರಿಸ್:– ಮಾನ್ಯ ಅಧ್ಯಕ್ಷರೆ, ಒಬ್ಬ ಸದಸ್ಯನಾಗಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಇದೇನು ಬೇರೆ ರಾಜ್ಯಕ್ಕೆ ಸಂಬಂಧಪಟ್ಟಂಥ ಪ್ರಶ್ನೆಯಲ್ಲ. ನಮ್ಮ ರಾಜ್ಯದ ಸರ್ಕಾರಕ್ಕೆ ಸೇರಿರತಕ್ಕಂಥ ಪ್ರಶ್ನೆಯಾಗಿದೆ. ಇದನ್ನು ಸಂಬಂಧಪಟ್ಟಂಥ ಇಲಾಖೆ ವರ್ಗಾವಣೆ ಮಾಡುವುದನ್ನು ಬಿಟ್ಟು ಯಾರಿಗೆ ಸೇರುತ್ತದೆ ಅವರು ಉತ್ತರ ಕೊಡುತ್ತಾರೆಂದು ಹೇಳಿದರೆ ಹೇಗೆ?

ಅಧ್ಯಕ್ಷರು:– ಈಗಾಗಲೇ ಸಂಬಂಧಪಟ್ಟಂಥ ಇಲಾಖೆ ವರ್ಗಾವಣೆ ಮಾಡಿದ್ದಾರೆ. ಈಗ ಆ ಇಲಾಖೆಯಿಂದ ಉತ್ತರ ಬರಬೇಕು. ಮುಂದಿನ ವಾರ ನಿಮ್ಮ ಪ್ರಶ್ನೆಗೆ ಉತ್ತರ ಕೊಡಿಸುತ್ತೇನೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರಾದ ಕೊಳವೆ ಬಾವಿಗಳು.

13(128) ಶ್ರೀ ನರಸಿಂಹನಾಯಕ (ರಾಜು ಗೌಡ)
ಶ್ರೀ ಡಿ.ಸುಧಾಕರ್ ಸಮಾಜ ಕಲ್ಯಾಣ ಸಚಿವರು

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮಂಜೂರಾದ ಒಟ್ಟು ಕೊಳವೆ ಬಾವಿಗಳೆಷ್ಟು;

2008–09ನೇ ಸಾಲಿಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರಿಗೆ 775 ಹಾಗೂ ಪರಿಶಿಷ್ಟ ಪಂಗಡದವರಿಗೆ 178 ಕೊಳವೆ ಬಾವಿಗಳು ಮಂಜೂರುಮಾಡಲಾಗಿದೆ.

ಆ) ಇದರಲ್ಲಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲಾಗಿದೆ;

ಇ) ಎಷ್ಟು ಕೊಳವೆ ಬಾವಿಗಳಿಗೆ ಮೋಟಾರ್ ಪಂಪ್‌ಸೆಟ್ ಹಾಗೂ ಇತರೆ ಸಾಮಾಗ್ರಿಗಳನ್ನು ಒದಗಿಸಿ ಕೊಡಲಾಗಿದೆ?

ಈ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕೊಡಲು ಹಾಗೂ ಬೇಕಾದ ಪಂಪ್ ಸೆಟ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ನರಸಿಂಹನಾಯಕ(ರಾಜುಗೌಡ):– ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2008–09ನೇ ಸಾಲಿಗೆ

ಗುಲ್ಬರ್ಗಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರಿಗೆ 775 ಹಾಗೂ ಪರಿಶಿಷ್ಟ ಪಂಗಡದವರಿಗೆ 178 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಈಗಾಗಲೇ ಸಾಕಷ್ಟು ವರ್ಷಗಳಿಂದ ಬೋರವೆಲ್‌ಗಳನ್ನು ಕೊರೆಸಿಕೊಂಡು ಬಂದಿದ್ದಾರೆ. ಆದರೆ, ಇದುವರೆಗೂ ಕೂಡ ಯಾವುದಕ್ಕೂ ಪಂಪ್‌ಸೆಟ್‌ಗಳ ವಿತರಣೆ ಮತ್ತು ವಿದ್ಯುತ್ ಸಂಪರ್ಕ ಆಗಿಲ್ಲ. ಈ ಬಗ್ಗೆ ನಾವು ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿರುವುದಕ್ಕೆ ಅವರು ಬೇಕಾಬಿಟ್ಟಿಯಾದ ಉತ್ತರವನ್ನು ಕೊಟ್ಟಿದ್ದಾರೆ. ಅಂದರೆ, ಈ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕೊಡಲು ಹಾಗೂ ಬೇಕಾದ ಪಂಪ್ ಸೆಟ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಏನು ಕ್ರಮ ಕೈಗೊಂಡಿದ್ದೀರೆಂದು ನಾವು ಪ್ರಶ್ನೆ ಕೇಳಿದರೆ, ಕ್ರಮ ಕೈಗೊಳ್ಳಲಾಗಿದೆ ಎಂದು ಸೇರಿಸಿ ನಮ್ಮ ಪ್ರಶ್ನೆಗೆ ಉಲ್ಟಾ ಉತ್ತರ ಕೊಟ್ಟಿದ್ದಾರಷ್ಟೆ. ಮಾನ್ಯ ಸಚಿವರಲ್ಲಿ ನಾನು ಕೇಳುವುದೇನೆಂದರೆ, ಕಳೆದ ಸಲ ಅವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಏನು ಹೇಳಿದರೆಂದರೆ, ಶಾಸಕರು ತಡವಾಗಿ ಕೊಟ್ಟಿದ್ದರಿಂದ ತಡವಾಯಿತ್ತೆಂದು ಉತ್ತರ ಕೊಟ್ಟಿದ್ದರು. ಯಾವ್ಯಾವ ತಾಲ್ಲೂಕುಗಳಲ್ಲಿ ನಿಮ್ಮ ಅಧಿಕಾರಿಗಳು ಇದ್ದಾರೆಂದು ಹೇಳಿ.. ಎಸ್‌ಸಿ:ಎಸ್‌ಟಿ ಫಲಾನುಭವಿಗಳಿಗೆ ಒಂದು ಬೋರವೆಲ್ ಕೊರೆಯುವುದಕ್ಕೆ ಒಂದು ಲಕ್ಷ ರೂಪಾಯಿ ಸರ್ಕಾರದ ಕಡೆಯಿಂದ ಕೊಡುತ್ತೇವೆ. ಆದರೆ, ಈ ಹಣ ಸರಿಯಾಗಿ ಉಪಯೋಗವಾಗುತ್ತಿದೆಯೇ ಎಂದು ನೋಡತಕ್ಕಂಥದ್ದು ಸಚಿವರ ಕರ್ತವ್ಯವಾಗಿರುತ್ತದೆ. ಈ ಕೆಲಸ ಎಲ್ಲಿಯೂ ಸಹ ಆಗುತ್ತಿಲ್ಲ. ಸುಮ್ಮನೆ ಎಸ್‌ಸಿ:ಎಸ್‌ಟಿ ಫಲಾನುಭವಿಗಳಿಗೆ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಬೋರೆವೆಲ್ ಕೊರೆಸುವುದಕ್ಕೆ ಅಷ್ಟು ಹಣ ಕೊಡುತ್ತೇವೆಂದು ಹೇಳುತ್ತೇವೆ. ಆದರೆ, ಇದರಲ್ಲಿ ಎಷ್ಟು ಉಪಯೋಗವಾಗಿದೆ, ಇದರಿಂದ ಎಷ್ಟು ಎಕರೆ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಸಚಿವರು ಸಭೆಗೆ ಒದಗಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಡಿ.ಸುಧಾಕರ್:– ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಗುಲ್ಬರ್ಗಾ ಜಿಲ್ಲೆಯಲ್ಲಿ 927 ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲಾಗಿದೆ. ಮತ್ತೆ 2008–09ನೇ ಸಾಲಿನಲ್ಲಿ ಬಾಕಿ ಇರುವ ಕಡೆ ಮೋಟಾರ್‌ಗಳನ್ನು ತಕ್ಷಣ ಕೊಡುವುದಕ್ಕೆ ಸಹ ಕ್ರಮ ಕೈಗೊಳ್ಳಲಾಗಿದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ನರಸಿಂಹನಾಯಕ(ರಾಜುಗೌಡ):– ಮಾನ್ಯ ಅಧ್ಯಕ್ಷರೆ, ಬೋರ್‌ವೆಲ್ ಕೊರೆಯುವುದಕ್ಕೆ ಟೆಂಡರ್ ಕರೆಯಲಾಗಿತ್ತು. ಆದರೆ, ಅದು ರದ್ದಾಗಿದ್ದು, ಮತ್ತೆ ಟೆಂಡರ್ ಕರೆಯುತ್ತೇನೆಂದು ಹೇಳಿದ್ದರು. ಮತ್ತೊಬ್ಬ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಬೋರ್‌ವೆಲ್ ಕೊರೆದಿಲ್ಲವೆಂದು ತಾವೇ ಉತ್ತರ ಕೊಟ್ಟಿದ್ದೀರಿ. ಆದರೆ, ಈಗ ಪರಿಶಿಷ್ಟ ಜಾತಿಯವರಿಗೆ 775 ಹಾಗೂ ಪರಿಶಿಷ್ಟ ಪಂಗಡದವರ 178 ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ ಎಂದು ಉತ್ತರ

ಕೊಟ್ಟಿದ್ದೀರಿ. ಈ ರೀತಿಯಾದ ತಪ್ಪು ಉತ್ತರವನ್ನು ತಾವು ದಯಮಾಡಿ ಕೊಡುವುದಕ್ಕೆ ಹೋಗಬೇಡಿ. ಅಲ್ಲಿ ಯಾವುದಕ್ಕೂ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಲ್ಲ. ಬೇಕಾದರೆ ಮಾನ್ಯ ಇಂಧನ ಸಚಿವರನ್ನು ಕೇಳಬಹುದು. ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ಇವರು ಅಲ್ಲಿ ರಿಜಿಸ್ಟರ್ ಮಾಡಿಸಿಲ್ಲ. ಈ ಬಗ್ಗೆ ಕೆಡಿಪಿ ಸಭೆಯಲ್ಲಿ ಮತ್ತು ಇತರೇ ಸಭೆಗಳಲ್ಲಿಯೂ ಕೂಡ ಕೇಳಿದ್ದೇನೆ. ಸುಮಾರು 5–6 ವರ್ಷಗಳಿಂದ ಇಡೀ ರಾಜ್ಯದಲ್ಲಿ ಸುಮಾರು 7–8 ಸಾವಿರ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿಲ್ಲ. ಆದ್ದರಿಂದ, ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುವುದೇನೆಂದರೆ, ಎಷ್ಟು ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗಿದೆಯೋ ಅವುಗಳಿಗೆ ಸಮಯ ನಿಗದಿ ಮಾಡಿ. ಅಂದರೆ, ಎರಡು, ಮೂರು, ಅಥವಾ ಆರು ತಿಂಗಳೊಳಗೆ ವಿದ್ಯುತ್ ಸಂಪರ್ಕವನ್ನು ಒದಗಿಸಿ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:– ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿ ಈಗಾಗಲೇ ಒಂದು ಗಂಟೆ ಆಗಿದೆ. ಈಗ ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯ ಮಾಡುತ್ತೇನೆ. ಮಾನ್ಯ ಸುಧಾಕರ್‌ರವರೆ ಉತ್ತರ ಹೇಳಿ.

ಶ್ರೀ ಡಿ.ಸುಧಾಕರ್:– ಮಾನ್ಯ ಅಧ್ಯಕ್ಷರೆ, 2008–09ನೇ ಸಾಲಿಗೆ ಸಂಬಂಧಪಟ್ಟಂಥ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. 2009–10ನೇ ಸಾಲಿಗೆ ಸಂಬಂದಪಟ್ಟಂಥ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ನಾವು ಟೆಂಡರ್ ಕರೆಯುತ್ತೇವೆಂದು ಹೇಳಿದ್ದೇನೆ. 2009–9ನೇ ಸಾಲಿನಲ್ಲಿ 927 ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ. ರಾಜ್ಯದಲ್ಲಿ ಈ ವರ್ಷ ಸುಮಾರು 23 ಸಾವಿರ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗಿದೆ. ಇದನ್ನು ಹಂತ ಹಂತವಾಗಿ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

14(107) ಶ್ರೀ ಖಾದರ್ ಯು.ಟಿ. (ಮಂಗಳೂರು)

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ದಕ್ಷಣ ಕನ್ನಡ ಜಿಲ್ಲೆಯಲ್ಲಿ ಡೆಂಗ್ಯೂ ಜ್ವರ ಮತ್ತು ಚಿಕುನ್‌ಗುನ್ಯಾ ರೋಗಗಳು ತೀವ್ರವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ. ಹಾಗಿದ್ದಲ್ಲಿ, ಈ ಕಾಯಿಲೆಯಿಂದ ನರಳುತ್ತಿರುವ ರೋಗಿಗಳ ಸಂಖ್ಯೆ ಎಷ್ಟು; ಮೃತಪಟ್ಟವರ ಸಂಖ್ಯೆ ಎಷ್ಟು;